# ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ನೇಮಕಾತಿ ಪರೀಕ್ಷೆ - 2017

## ಅಧಿಸೂಚನೆ ಸಂಖ್ಯೆ: 60/ನೇಮಕಾತಿ-2/2017-18, ದಿನಾಂಕ: 22-06-2017

## ಪ್ರಶ್ನೆಪತ್ರಿಕೆ-1

**I. ಕೆಳಕಂಡ ಯಾವುದಾದರೂ ಒಂದು ವಿಷಯದ ಮೇಲೆ 600 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. ಪದಗಳ ಮಿತಿ ಮೀರಿದ ಪ್ರಬಂಧಗಳಿಗೆ ಅಂಕಗಳನ್ನು ಕಳೆಯಲಾಗುವುದು. 20 X 1 = 20**

1) ಅಂಕೀಯ ವಯಸ್ಸು–ವರವೋ ಅಥವಾ ಶಾಪವೋ?
2) ಭಯೋತ್ಪಾದನೆಯನ್ನು ಎದುರಿಸುವಲ್ಲಿ ಸಮಾಜಶಾಸ್ತ್ರ
3) ಪ್ರಜಾಪ್ರಭುತ್ವದಲ್ಲಿ ಮಾಧ್ಯಮದ ಪಾತ್ರ.
4) ವಾಹನ ಸಂಚಾರ ದಟ್ಟಣೆ–ಕಾರಣಗಳು ಮತ್ತು ಪರಿಹಾರಗಳು
5) ನ್ಯಾಯಾಂಗ ಚಟುವಟಿಕೆ

2. ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷ್‌ಗೆ ಭಾಷಾಂತರಿಸಿ:

ಜಗತ್ತಿನ ಪ್ರತಿಯೊಂದು ಸಂವಿಧಾನವು ಪ್ರಸ್ತಾವನೆ ಅಥವಾ ಪೂರ್ವ ಪೀಠಿಕೆಯೊಂದಿಗೆ ಆರಂಭವಾಗುತ್ತದೆ. ಹಾಗೆಯೇ ಭಾರತದ ಸಂವಿಧಾನವೂ ಸಹ ಪ್ರಸ್ತಾವನೆಯೊಂದಿಗೆ ಆರಂಭವಾಗುತ್ತದೆ. ಪ್ರಸ್ತಾವನೆ ಎಂದರೆ ಪೀಠಿಕೆಯ ಭಾಗ. ಅದು ನಮಗೆ ಸಂವಿಧಾನದ ಪರಿಚಯ ನೀಡುತ್ತದೆ. ಪ್ರಸ್ತಾವನೆಯು ಸಂವಿಧಾನದ ಆದರ್ಶತತ್ವ, ಗುರಿ ಮತ್ತು ಉದ್ದೇಶಗಳನ್ನು ಸ್ಪಷ್ಟಪಡಿಸುತ್ತದೆ. ಪ್ರಸ್ತಾವನೆಯು ಸಂವಿಧಾನದ ಆತ್ಮ ಇದ್ದಂತೆ. ಸಂವಿಧಾನದ ಮುಖಪುಟ ಪೀಠಿಕಾ ಭಾಗವನ್ನು ಓದುವುದರಿಂದ ಸಂವಿಧಾನದಲ್ಲಿ ಏನಿದೆ? ಅದನ್ನು ಯಾವ ಉದ್ದೇಶದಿಂದ ರಚಿಸಲಾಗಿದೆ? ಎಂದು ತಿಳಿದುಕೊಳ್ಳಲು ನೆರವಾಗುತ್ತದೆ. ಅದು ಸಂವಿಧಾನದ ಮೂಲ ಸ್ವರೂಪವನ್ನು ವಿವರಿಸುತ್ತದೆ.

ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಸಂವಿಧಾನ ರಚನಾ ಸಭೆ ಅಂಗೀಕರಿಸಿತ್ತು. ಈ ಪ್ರಸ್ತಾವನೆಯಲ್ಲಿ ಭಾರತವು ಸ್ವಾತಂತ್ರ್ಯ, ಗಣರಾಜ್ಯ, ಪ್ರಜೆಗಳ ಪರಮಾಧಿಕಾರ ಎಂದು ವಿವರಿಸಲಾಗಿದೆ. ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಸಮಾಜವಾದಿ ಹಾಗೂ ಜಾತ್ಯಾತೀತ ಪದಗಳನ್ನು 42ನೇ ತಿದ್ದುಪಡಿಯಿಂದ ಸೇರಿಸಲಾಯಿತು.

ಭಾರತವು ಒಂದು ಸರ್ವತ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿದೆ. ಏಕೆಂದರೆ ಭಾರತ ಈಗ ಯಾರ ಅಧೀನದಲ್ಲೂ ಇಲ್ಲ. ಆಂತರಿಕ ಹಾಗೂ ಬಾಹ್ಯ ವ್ಯವಹಾರಗಳಲ್ಲಿ ಸ್ವತಂತ್ರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವ ವಿದೇಶಾಂಗ ನೀತಿ ರೂಪಿಸುವ ಅಧಿಕಾರ ಹೊಂದಿದೆ. ನಮ್ಮ ಸಂವಿಧಾನವನ್ನು ಭಾರತೀಯರೇ ರಚಿಸಿ ಶಾಸನಬದ್ಧಗೊಳಿಸಿ ತಮಗೆ ತಾವೇ ಅರ್ಪಿಸಿಕೊಂಡಿದ್ದೇವೆ ಎಂದು ಪ್ರಸ್ತಾವನೆಯಲ್ಲಿ ಘೋಷಿಸಲಾಗಿದೆ.

3. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿ:

Most People want to crack the life's puzzele of happiness by fulfilling desires, but a time will come when they realise that not all desires are meant to be fulfilled; some are meant to be conquered. This is why a deam job, a dream house or a dream car, once in ossession, becomes part of the routine. I am all for people working towards elevating theirs financial status and enjoying physical comforts. However, that not many enjoy the journey amazes me. If people understand the difference between a desire and a goal, they will live a more aware life.

A goal and a desire are not same. Desire is your attachment to the goal, not the goal. it is very important to understand that your goals can exist even if you give up attachment to the goals. Keep thinking how you can ensure that you are detached to the outcome of the goal and only attached to the action needed to achieve it.

4. ಈ ಕೆಳಗಿನ ಕನ್ನಡ ಲೇಖನವನ್ನು 1/3 ರಷ್ಟಕ್ಕೆ ಇಳಿಸಿ ಸಾರಾಂಶವನ್ನು ಬರೆಯಿರಿ ಮತ್ತು ಅದಕ್ಕೊಂದು ಶೀರ್ಷಿಕೆಯನ್ನು ಕೊಡಿ.

ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ನ್ಯಾಯಾಲಯದಲ್ಲಿ ಹೂಡುವ ಪ್ರಕರಣವನ್ನು ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಿಸಲು ನ್ಯಾಯಾಲಯದಲ್ಲಿ ಸಲ್ಲಿಸುವ ರಿಟ್ ಅರ್ಜಿ ಇದಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ದುರ್ಬಲವಾದವರಿಗೆ ಸಂವಿಧಾನಿಕ ನ್ಯಾಯ ಒದಗಿಸುವ ಹೊಸ ವಿಧಾನವಾಗಿದೆ. ಸರ್ಕಾರದ ನಿರ್ಧಾರಗಳಿಂದ ಸಾರ್ವಜನಿಕರಿಗೆ ತೊಂದರೆ ಉಂಟಾದರೆ ಅಥವಾ ಜನರ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದರೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿ ನ್ಯಾಯ ಪಡೆಯಬಹುದಾಗಿದೆ. ಒಬ್ಬ ವ್ಯಕ್ತಿ ಬಡತನ, ಅಜ್ಞಾನದಿಂದ, ಆರ್ಥಿಕ ದುರ್ಬಲತೆಯಿಂದಾಗಿ ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗಲು ಸಾಧ್ಯವಾಗದೇ ಹೋದಲ್ಲಿ ಅವರ ಪರವಾಗಿ ಮೂರನೇ ವ್ಯಕ್ತಿ ನ್ಯಾಯಾಲಯದ ಮೊರೆ ಹೋದರೆ ಅದೂ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಎನಿಸಿಕೊಳ್ಳುತ್ತದೆ.

ಶಬ್ದ ಮಾಲಿನ್ಯ, ವಾಯುಮಾಲಿನ್ಯ, ಮಾನವ ಹಕ್ಕು ಉಲ್ಲಂಘನೆ ಮೊದಲಾದ ಸಂದರ್ಭದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಬಹುದು. ಇದರ ಪ್ರಕ್ರಿಯೆಯು ತುಂಬಾ ಸರಳ. ನೊಂದವರೇ ಅದನ್ನು ಹೂಡಬೇಕೆಂದಿಲ್ಲ. ಅವರ ಪರವಾಗಿ ಯಾರು ಬೇಕಾದರೂ ಹೂಡಬಹುದು. ಒಂದು ಅಂಚೆ ಬರೆದು ಅಥವಾ ತಂತಿ ಸಂದೇಶ ನೀಡಿ, ಮೊಕದ್ದಮೆ ದಾಖಲಿಸುವಂತೆ ಕೋರಿದರೂ ಸಾಕು ನ್ಯಾಯಾಲಯ ಅದನ್ನು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಎಂದು ಪರಿಗಣಿಸಿ ವಿಚಾರಣೆ ನಡೆಸುತ್ತದೆ. ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ಪರಿಸರ ಸಂರಕ್ಷಣೆ, ಭಿಕ್ಷಾಟನೆ, ಜೀತಗಾರಿಗೆ, ವೇಶ್ಯಾವಾಟಿಕೆ ಇಂತಹ ಅನೇಕ ವಿಷಯಗಳ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳಲ್ಲಿ ಮಹತ್ವದ ತೀರ್ಪು ನ್ಯಾಯಾಲಯಗಳು ನೀಡಿವೆ.

# ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ನೇಮಕಾತಿ ಪರೀಕ್ಷೆ - 2017

## ಅಧಿಸೂಚನೆ ಸಂಖ್ಯೆ: 60/ನೇಮಕಾತಿ-2/2017-18, ದಿನಾಂಕ: 22-06-2017

## ಪ್ರಶ್ನೆಪತ್ರಿಕೆ-2 ವಿಷಯ: ಸಾಮಾನ್ಯ ಅಧ್ಯಯನ

1. ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಯಾಗಲು, ಓರ್ವ ಕನಿಷ್ಠ ಎಷ್ಟು ವರ್ಷಗಳು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರಬೇಕು?
ಎ) 5 ವರ್ಷಗಳು ಬಿ) 7 ವರ್ಷಗಳು
ಸಿ) 4 ವರ್ಷಗಳು
ಡಿ) ಮೇಲಿನವುಗಳಲ್ಲಿ ಯಾವುದೂ ಅಲ್ಲ

2. ಡಿಜಿಟಲ್ ವ್ಯವಸ್ಥೆಯಲ್ಲಿ ಅತ್ಯಂತ ಚಿಕ್ಕ ಘಟಕ ಇದಾಗಿದೆ
ಎ) ಬೈಟ್ ಬಿ) ಅಕ್ಷರಗಳು
ಸಿ) ಬಿಟ್ ಡಿ) ಶಬ್ದ

3. ಭಾಕ್ರಾನಂಗಲ್ ಅಣೆಕಟ್ಟು ಯಾವ ನದಿಯ ಮೇಲಿದೆ?
ಎ) ಸಟ್ಲೆಜ್ ಬಿ) ರಾವಿ
ಸಿ) ಚೆನಾಬ್ ಡಿ) ಬೀಸ್

4. ಒಲಿಂಪಿಕ್ ಮೆಡಲನ್ನು ಜಯಿಸಿದ ಪ್ರಥಮ ಭಾರತೀಯ ಮಹಿಳೆ ಯಾರು?
ಎ) ಪಿ ಟಿ ಉಷಾ ಬಿ) ಕರ್ಣಮ್ ಮಲ್ಲೇಶ್ವರಿ
ಸಿ) ಮೇರಿ ಕಾಮ್ ಡಿ) ಚಾನು

5. ಭಾರತೀಯ ಇತಿಹಾಸದಲ್ಲಿ ಆಗಸ್ಟ್ 9, 1925 ಈ ಕಾರಣಕ್ಕಾಗಿ ಪರಿಚಿತ
ಎ) ಚೌರಿ-ಚೌರ ಪ್ರಕರಣ
ಬಿ) ಜಲಿಯನ್ ವಾಲಾ ಬಾಗ್ ಪ್ರಕರಣ
ಸಿ) ಬಂಗಾಳ ವಿಭಜನೆ
ಡಿ) ಕಕೋರಿ ಟ್ರೇನ್ ದರೋಡೆ

6. ಭಾರತೀಯ ರೂಪಾಯಿಗೆ ಕರೆನ್ಸಿ ಚಿಹ್ನೆಯನ್ನು ಈ ವರ್ಷ ಚಲಾವಣೆಗೆ ತರಲಾಯಿತು.
ಎ) 2012 ಬಿ) 2010 ಸಿ) 2011 ಡಿ) 2000

7. ಕೆಳಗಿನವುಗಳಲ್ಲಿ ಯಾವುದು ಸಾಮಾಜಿಕ ಮಾಧ್ಯಮಗಳ ನಮೂನೆಯಾಗಿದೆ?
ಎ) ಫೇಸ್‌ಬುಕ್ ಬಿ) ಲಿಂಕ್ಡ್ ಇನ್
ಸಿ) ಟ್ವಿಟರ್ ಡಿ) ಮೇಲಿನ ಎಲ್ಲವೂಗಳು

8. ಕವಿರಾಜಮಾರ್ಗದ ಕರ್ತೃ ಯಾರು?
ಎ) ಪಂಪ ಬಿ) ಅಮೋಘವರ್ಷ 1
ಸಿ) ನಾಗವರ್ಮ ಡಿ) ಚಾವುಂಡರಾಯ

9. ಯಾವ ವರದಿಯನ್ನು ಆಧರಿಸಿ 1956ರಲ್ಲಿ ಕರ್ನಾಟಕವು ರೂಪುಗೊಂಡಿತು?
ಎ) JVP ಸಮಿತಿ ಬಿ) ಧರ್ ಸಮಿತಿ
ಸಿ) ಫಝಲ್ ಅಲಿ ಸಮಿತಿ ಡಿ) ವಾಂಛೂ ಸಮಿತಿ

10. ಮುಳ್ಳಪೆರಿಯ ಅಣೆಕಟ್ಟು ಈ ರಾಜ್ಯಗಳ ನಡುವೆ ವಿವಾದದ ವಸ್ತುವಾಗಿದೆ
ಎ) ತಮಿಳುನಾಡು ಮತ್ತು ಕೇರಳ
ಬಿ) ತಮಿಳುನಾಡು ಮತ್ತು ಕರ್ನಾಟಕ
ಸಿ) ತಮಿಳುನಾಡು ಮತ್ತು ಆಂಧ್ರಪ್ರದೇಶ
ಡಿ) ಮೇಲಿನವುಗಳಲ್ಲಿ ಯಾವುದೂ ಅಲ್ಲ

11. ಕಣಗಳ ರಾಷ್ಟ್ರೀಯ ಚಲನೆಯಿಂದ ಉಂಟಾದ ಅಣುಗಳ ಅನಿಯತ ಚಲನೆಯನ್ನು ಹೀಗೆನ್ನುತ್ತಾರೆ
ಎ) ವೇಗ ಬಿ) ಅಪವಾಹ ವೇಗ
ಸಿ) ಬೌನಿಯನ್ ಚಲನೆ ಡಿ) ವಿಸರಣ

12. ಗಾಳಿಯಲ್ಲಿ ಧ್ವನಿ ಪ್ರಸರಣವಾಗುವ ಸಂಗತಿಯು ಇದಾಗಿದೆ
ಎ) ಸಮತಾಪೀಯ ಪ್ರಕ್ರಿಯೆ
ಬಿ) ರುದ್ಧೋಷ್ಮರೇಖೆ ಪ್ರಕ್ರಿಯೆ
ಸಿ) ಐಸೋಕೋರಿಕ್ ಪ್ರಕ್ರಿಯೆ
ಡಿ) ಸಮವಾಯುಭಾರ ಸಂಯೋಜಕ ಪ್ರಕ್ರಿಯೆ

13. Tesla ಎಂಬುವುದು ಇದರ ಘಟಕವಾಗಿದೆ
ಎ) ವಿದ್ಯುತ್ ಕ್ಷೇತ್ರ ಬಿ) ವಿದ್ಯುತ್ ಹರಿವು
ಸಿ) ಅಯಸ್ಕಾಂತೀಯ ಕ್ಷೇತ್ರ ಡಿ) ಅಯಸ್ಕಾಂತೀಯ ಹರಿವು

14. ಕೆಳಗಿನವುಗಳಲ್ಲಿ ಯಾವುದು ರಾಸಾಯನಿಕ ಬದಲಾವಣೆ ಆಗಿರುತ್ತದೆ?
ಎ) ನಕ್ಷತ್ರಗಳ ಮಿನುಗುವಿಕೆ ಬಿ) ನೀರಿನ ಕುದಿಯುವಿಕೆ
ಸಿ) ಹಣ್ಣುಗಳ ತುಂಡರಿಸುವಿಕೆ ಡಿ) ತರಕಾರಿಗಳ ಬೇಯಿಸುವಿಕೆ

15. ಅಡುಗೆ ಸೋಡದ ರಾಸಾಯನಿಕ ಸೂತ್ರ ಇದಾಗಿದೆ
ಎ) NaHCO3 ಬಿ) NaOH
ಸಿ) NaCl ಡಿ) NaBr

16. ಸಾಗರ್ ಸಾಮ್ರಾಟ್ ಎಂಬುವುದು
ಎ) ತೈಲ ದಿಬ್ಬ
ಬಿ) ಸಂಶೋಧನ ನೌಕೆ
ಸಿ) ದಕ್ಷಿಣದ ನದಿಯ ಮೇಲಿನ ಅಣೆಕಟ್ಟು
ಡಿ) ಮೇಲಿನವುಗಳಲ್ಲಿ ಯಾವುದೂ ಅಲ್ಲ

17. ಭಾರತದಲ್ಲಿ ಅತೀ ದೊಡ್ಡ ನದೀ ಪಾತ್ರ (ನದಿತಟ್ಟೆ) ಇದಾಗಿದೆ
ಎ) ಗಂಗಾ ಬಿ) ಬ್ರಹ್ಮಪುತ್ರ
ಸಿ) ಗೋದಾವರಿ ಡಿ) ಇಂಡಸ್

18. ಯಾವ ರಾಜ್ಯವು ಸೆಣಬು ನಾರಿನ ಉದ್ಯಮವನ್ನು ಹೊಂದಿರುತ್ತದೆ?
ಎ) ಬಿಹಾರ ಬಿ) ಗುಜರಾತ್
ಸಿ) ಮಹಾರಾಷ್ಟ್ರ ಡಿ) ಮೇಲಿನ ಯಾವುದೂ ಅಲ್ಲ

19. ರಾಷ್ಟ್ರೀಯ ಹೆದ್ದಾರಿ 2 ಇದನ್ನು ಜೋಡಿಸುತ್ತದೆ
ಎ) ದೆಹಲಿಯಿಂದ ಕೋಲ್ಕತ್ತಾ ಬಿ) ದೆಹಲಿಯಿಂದ ಮುಂಬಯಿ
ಸಿ) ಚೆನ್ನೈಯಿಂದ ಬೆಂಗಳೂರು ಡಿ) ಆಗ್ರಾದಿಂದ ಚೆನ್ನೈ

20. ಜನಸಂಖ್ಯಾ ಸಾಂದ್ರತೆ ಅತೀ ಕಡಿಮೆಯಾಗಿರುವ ರಾಜ್ಯವನ್ನು ಹೆಸರಿಸಿ.
ಎ) ಮೇಘಾಲಯ ಬಿ) ಮಿಜೋರಾಂ
ಸಿ) ಅರುಣಾಚಲ ಪ್ರದೇಶ ಡಿ) ಸಿಕ್ಕಿಂ

21. ಕಾಜೋಲ್ ಅವಳ ಮನೆಯಿಂದ 20 ಮೀ. ಪಶ್ಚಿಮಕ್ಕೆ ಹೋಗಿ, ಮತ್ತೆ 10ಮೀ ಎಡಕ್ಕೆ ಹೋಗುತ್ತಾಳೆ. ಇದಾದ ನಂತರ ಅವಳು ಅವಳ ಎಡಕ್ಕೆ ತಿರುಗಿ 20 ಮೀ ಹೋಗುತ್ತಾಳೆ. ಅವಳು ಅವಳ ಮನೆಯಿಂದ ಎಷ್ಟು ದೂರ ಮತ್ತು ಯಾವ ದಿಕ್ಕಿನಲ್ಲಿ ಇರುತ್ತಾಳೆ?
ಎ) 20 ಮೀ, ಉತ್ತರ ಬಿ) 30 ಮೀ, ದಕ್ಷಿಣ
ಸಿ) 10 ಮೀ, ದಕ್ಷಿಣ ಡಿ) 10 ಮೀ, ಉತ್ತರ

22. ಕೆಳಗಿನವುಗಳಲ್ಲಿ ಯಾವುದು ಒಂದು ಉಳಿದ ಮೂರಕ್ಕಿಂತ ಭಿನ್ನವಾಗಿದೆ?
ಎ) ದೋಷಮುಕ್ತಗೊಳಿಸುವಿಕೆ ಬಿ) ವಜಾಮಾಡು
ಸಿ) ಪ್ರತಿಫಲ ಪ್ರತೀಕಾರ ಡಿ) ಖುಲಾಸೆ

23.

| | | |
|---|---|---|
| 7 | 21 | 8 |
| 17 | ? | 5 |
| 12 | 1 | 23 |

ಕೆಳಗಿನವುಗಳಲ್ಲಿ ಯಾವುದು ಕಾಣೆಯಾಗಿರುವ ಸಂಖ್ಯೆಯಾಗಿರುತ್ತದೆ?
ಎ) 14 ಬಿ) 18 ಸಿ) 3 ಡಿ) 1

24. 110 ಮೀ. ಉದ್ದದ ರೈಲೊಂದು 90 ಮೀ. ಉದ್ದದ ಪ್ಲಾಟ್ ಫಾರ್ಮ್‌ನ್ನು 10 ಸೆಕೆಂಡುಗಳಲ್ಲಿ ಹಾದು ಹೋಗುತ್ತದೆ. ರೈಲಿನ ವೇಗವು
ಎ) ಗಂಟೆಗೆ 54 ಕಿಮೀ. ಬಿ) ಗಂಟೆಗೆ 70 ಕಿ.ಮೀ.
ಸಿ) ಗಂಟೆಗೆ 72 ಕಿ.ಮೀ. ಡಿ) ಗಂಟೆಗೆ 90 ಕಿ.ಮೀ.

25. DDTಗೆ ಸಂಬಂಧಿಸಿದಂತೆ ಯಾವುದು ಸತ್ಯ? ಇದು
ಎ) ಒಂದು ಮಲಿನಕಾರಿಯಲ್ಲ
ಬಿ) ಒಂದು ಪ್ರತಿಜೀವಕ
ಸಿ) ಒಂದು ಕೀವುಗಳಕ ಏಜೆಂಟ್
ಡಿ) ಒಂದು ಸರಳ ಸಂಯುಕ್ತಗಳಾಗಿ ಒಡೆಯಲು ಸಾಧ್ಯವಿಲ್ಲದ ಮಲಿನಕಾರಿ

26. ಜೇನುಸಾಕಣೆಯು ಈ ಕೆಳಗಿನದ್ದಕ್ಕೆ ಸಂಬಂಧಿಸಿದ ಜೀವಶಾಸ್ತ್ರದ ಒಂದು ಶಾಖೆಯಾಗಿದೆ
ಎ) ಹೂ ಬಿಡುವ ಸಸ್ಯಗಳ ಕೃಷಿಯ ಅಧ್ಯಯನ
ಬಿ) ಜೇನ್ನೊಣಗಳ ಪಾಲನೆಯ ಅಧ್ಯಯನ
ಸಿ) ರೇಷ್ಮೆಹುಳುಗಳ ಪಾಲನೆಯ ಅಧ್ಯಯನ
ಡಿ) ಮೀನುಗಳ ಪಾಲನೆಯ ಅಧ್ಯಯನ

27. ಜೀವಕೋಶದ 'ಶಕ್ತಿಕೇಂದ್ರ' ಎಂದು ಯಾವುದನ್ನು ಕರೆಯಲಾಗುತ್ತದೆ?
ಎ) ಮೈಟೊಕಾಂಡ್ರಿಯ ಬಿ) ಸೆಂಟ್ರಿಯೋಲ್
ಸಿ) ಲೈಸೊಸೋಮ್ ಡಿ) ಗಾಲ್ಜಿ ಪರಿಕರ

28. ರೆಟಿನಾಲ್ ಎಂಬುವುದು ಇದರ ಇನ್ನೊಂದು ಹೆಸರಾಗಿರುತ್ತದೆ
ಎ) ವಿಟಮಿನ್ 'ಸಿ' ಬಿ) ವಿಟಮಿನ್ 'ಎ'
ಸಿ) ವಿಟಮಿನ್ 'ಡಿ' ಡಿ) ವಿಟಮಿನ್ 'ಕೆ'

29. ಮಾನವನಲ್ಲಿ ಉಪಾಪಚಯ ಪೀಠ ಇದಾಗಿದೆ
ಎ) ಹೃದಯ ಬಿ) ಯಕೃತ್ತು
ಸಿ) ಮೂತ್ರಪಿಂಡ ಡಿ) ಹೃದಯ-ಪುಪ್ಪುಸ ವ್ಯವಸ್ಥೆ

30. ಕೆಳಗಿನವುಗಳಲ್ಲಿ ಯಾವುದು ಸಿಂಧೂ ಕಣಿವೆ ನಾಗರಿಕತೆಯ ಅತ್ಯಂತ ದೊಡ್ಡ ನಗರವಾಗಿತ್ತು?
ಎ) ಕಾಲಿಬಂಗನ್ ಬಿ) ಲೋಥಾಲ್
ಸಿ) ಧೋಲೊವಿರ ಡಿ) ಮೊಹೆಂಜೋದಾರೊ

31. ಜೈನಧರ್ಮದ ಪ್ರಥಮ ತೀರ್ಥಂಕರ ಯಾರಾಗಿದ್ದರು?
ಎ) ಮಹಾವೀರ ಬಿ) ಪಾರ್ಶ್ವನಾಥ
ಸಿ) ಅಜಿತನಾಥ ಡಿ) ಋಷಬ

32. ಅಶೋಕನ ಯಾವ ಶಾಸನವು ಕಳಿಂಗದ ಮೇಲೆ ಆತನ ವಿಜಯವನ್ನು ವರ್ಣಿಸುತ್ತದೆ?
ಎ) ಹನ್ನೊಂದನೆಯದು ಬಿ) ಹನ್ನೆರಡನೆಯದು
ಸಿ) ಹದಿಮೂರನೆಯದು ಡಿ) ಹದಿನಾಲ್ಕನೆಯದು

33. ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸತ್ಯವಾಗಿವೆ?
ಎ) ಶಂಕರಾಚಾರ್ಯರು ಅದ್ವೈತವಾದವನ್ನು ಪ್ರತಿಪಾದಿಸಿದರು
ಬಿ) ಮಧ್ವಾಚಾರ್ಯರು ವಿಶಿಷ್ಟಾದ್ವೈತವಾದವನ್ನು ಪ್ರತಿಪಾದಿಸಿದರು
ಸಿ) ಎರಡೂ
ಡಿ) ಯಾವುದೂ ಅಲ್ಲ

34. ಕೆಳಗಿನವರಲ್ಲಿ ಯಾರು ವಿಜಯನಗರ ಸಾಮ್ರಾಜ್ಯಕ್ಕೆ ಪ್ರಯಾಣಿಸಲಿಲ್ಲ?
ಎ) ಇಬ್ನ್ ಬಟೂಟ ಬಿ) ಅಬ್ದು-ರ್-ರಝಾಕ್
ಸಿ) ನಿಕೊಲೊ ಕಾಂಟಿ ಡಿ) ಮಾರ್ಕೊ ಪೋಲೊ

35. ಬಂಗಾಳದ ವಿಭಜನೆಯು ______ರಲ್ಲಿ ರದ್ದುಗೊಳಿಸಲ್ಪಟ್ಟಿತು.
ಎ) 1911 ಬಿ) 1935 ಸಿ) 1947 ಡಿ) 1956

36. ಭಗತ್ ಸಿಂಗ್, ಸುಖ್‌ದೇವ್ ಮತ್ತು ರಾಜ್‌ಗುರು ಇವರು ಈ ಕಾರಣಕ್ಕಾಗಿ ನೇಣಿಗೇರಿಸಲ್ಪಟ್ಟರು
ಎ) ಮೀರತ್ ಒಳಸಂಚು ಬಿ) ಆಲಿಪುರ್ ಒಳಸಂಚು
ಸಿ) ಲಾಹೋರ್ ಒಳಸಂಚು ಡಿ) ಯಾವುದೂ ಅಲ್ಲ

37. ಕೆಳಗಿನ ಸಂಘಟನೆಗಳಲ್ಲಿ ಯಾವುದು ಸೈಮನ್ ಆಯೋಗವನ್ನು ಬಹಿಷ್ಕರಿಸಿತು?
1. ಕಾಂಗ್ರೆಸ್
2. ಮುಸ್ಲಿಂ ಲೀಗ್
3. ಹಿಂದೂ ಮಹಾಸಭಾ
ಎ) 1, 2, 3, ಬಿ) 1, 2
ಸಿ) 1, 3 ಡಿ) 2, 3

39. ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಏಕಮಾತ್ರ ವಾರ್ಷಿಕ ಕಾಂಗ್ರೆಸ್ ಅಧಿವೇಶನವು ಇದಾಗಿತ್ತು
ಎ) ಕಾಕಿನಾಡ, 1923 ಬಿ) ಬೆಳಗಾವಿ, 1924
ಸಿ) ಕಾನ್ಪುರ, 1925 ಡಿ) ಗುವಾಹಟಿ, 1926

39. ಕರ್ನಾಟಕ ಸಂಗೀತದ ಪಿತಾಮಹ ಯಾರು?
ಎ) ಕನಕದಾಸರು ಬಿ) ಪುರಂದರದಾಸರು
ಸಿ) ರಾಘವಾಂಕ ಡಿ) ಸರ್ವಜ್ಞ

40. ಯಾವ ಸಮಿತಿಯು ಭಾರತೀಯ ಕ್ರಿಕೆಟ್ ಮಂಡಳಿ ವಿನ್ಯಾಸದಲ್ಲಿ ಬದಲಾವಣೆಗಳನ್ನು ಶಿಫಾರಸು ಮಾಡಿತು?
ಎ) ಲೋಧಾ ವರದಿ ಬಿ) ದೇಬ್‌ರಾಯ್ ವರದಿ
ಸಿ) ಪರೇಖ್ ವರದಿ ಡಿ) ಶ್ರೀಕೃಷ್ಣ ವರದಿ

41. 1969ರಲ್ಲಿ ಎಷ್ಟು ಬ್ಯಾಂಕುಗಳು ರಾಷ್ಟ್ರೀಕರಣಗೊಂಡವು?
ಎ) 16 ಬಿ) 14 ಸಿ) 15 ಡಿ) 20

42. ಜಾಗತಿಕ ಯೋಗ ದಿನವು ಈ ದಿನಾಂಕದಂದು ಆಚರಿಸಲ್ಪಡುತ್ತದೆ
ಎ) 20 ಜೂನ್ ಬಿ) 22 ಜೂನ್
ಸಿ) 21 ಜೂನ್ ಡಿ) 30 ಜೂನ್

43. ಶ್ರೀರಾಮ್‌ನಾಥ್ ಕೋವಿಂದ್ ಇವರು
ಎ) ಭಾರತದ 15ನೆಯ ರಾಷ್ಟ್ರಾಧ್ಯಕ್ಷರು
ಬಿ) ಭಾರತದ 13ನೆಯ ರಾಷ್ಟ್ರಾಧ್ಯಕ್ಷರು
ಸಿ) ಭಾರತದ 12ನೆಯ ರಾಷ್ಟ್ರಾಧ್ಯಕ್ಷರು
ಡಿ) ಭಾರತದ 14ನೆಯ ರಾಷ್ಟ್ರಾಧ್ಯಕ್ಷರು

44. ಯಾವ ದೇಶವು SAARC ನ ಭಾಗವಾಗಿರುವುದಿಲ್ಲ?
ಎ) ನೇಪಾಳ ಬಿ) ಮಯನ್ಮಾರ್
ಸಿ) ಅಫಘಾನಿಸ್ಥಾನ ಡಿ) ಬಾಂಗ್ಲಾದೇಶ

45 ಕಥಕ್ಕಳಿಯು ಯಾವ ರಾಜ್ಯದ ನೃತ್ಯವಾಗಿದೆ?
ಎ) ಕೇರಳ ಬಿ) ಕರ್ನಾಟಕ
ಸಿ) ಆಂಧ್ರಪ್ರದೇಶ ಡಿ) ಮಣಿಪುರ

46. ಕಂಪ್ಯೂಟರ್‌ನಲ್ಲಿ 'MPG' ಎಂದು ಯಾವ ಕಡತಕ್ಕೆ ಹೇಳುತ್ತಾರೆ?
ಎ) ಮೂವಿ ಫೈಲ್
ಬಿ) ಇಮೇಜ್ ಫೈಲ್
ಸಿ) ಎಂ ಎಸ್ ಆಫೀಸ್ ವರ್ಡ್ ಡಾಕ್ಯುಮೆಂಟ್
ಡಿ) ಪವರ್ ಪಾಯಿಂಟ್

47. ಅತೀ ದೊಡ್ಡ ಹುಲಿ ಸಂರಕ್ಷಣ ತಾಣ ಇಲ್ಲಿದೆ
ಎ) ಕರ್ನಾಟಕ ಬಿ) ಆಂಧ್ರಪ್ರದೇಶ
ಸಿ) ತಮಿಳುನಾಡು ಡಿ) ಮಧ್ಯಪ್ರದೇಶ

48. ಯಾವ ಕ್ರೀಡೆಗೆ ಅಶ್ವಿನಿ ಪೊನ್ನಪ್ಪ ಅರ್ಜುನ ಪ್ರಶಸ್ತಿ ಗೆದ್ದರು?
ಎ) ಈಜುವಿಕೆ ಬಿ) ಬ್ಯಾಡ್‌ಮಿಂಟನ್
ಸಿ) ಚದುರಂಗ ಡಿ) ಕ್ಯಾರಮ್

49. ಭಾರತ ಸಂವಿಧಾನದ ಯಾವ ವಿಧಿಯು ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುತ್ತದೆ?
ಎ) 300ನೆಯ ವಿಧಿ ಬಿ) 356ನೆಯ ವಿಧಿ
ಸಿ) 370ನೆಯ ವಿಧಿ ಡಿ) 368ನೆಯ ವಿಧಿ

50. ರಕ್ಕಸ ತಂಗಡಿ ಅಥವಾ ತಾಳಿಕೋಟೆ ಯುದ್ಧವು ಈ ವರ್ಷ ನಡೆಯಿತು.
ಎ) 1565 ಬಿ) 1545 ಸಿ) 1550 ಡಿ) 1560

51. ಕರ್ನಾಟಕದಲ್ಲಿ ಉಷ್ಣ ವಿದ್ಯುಚ್ಛಕ್ತಿ ಸ್ಥಾವರಗಳು ಇಲ್ಲಿ ಇವೆ
ಎ) ರಾಯಚೂರು ಮತ್ತು ಕಲಬುರ್ಗಿ
ಬಿ) ರಾಯಚೂರು ಮತ್ತು ಬಳ್ಳಾರಿ
ಸಿ) ಕಲಬುರ್ಗಿ ಮತ್ತು ಬಳ್ಳಾರಿ
ಡಿ) ಬಳ್ಳಾರಿ ಮತ್ತು ಕೊಪ್ಪಳ

52. ಫೇಸ್‌ಬುಕ್‌ನ ಸ್ಥಾಪಕ ಯಾರು?
ಎ) ಟಿಮ್ ಕುಕ್ ಬಿ) ಜಿಮ್ಮಿ ವೇಲ್ಸ್
ಸಿ) ಮಾರ್ಕ್ ಜುಕರ್‌ಬರ್ಗ್ ಡಿ) ಜೂಲಿಯನ್

53. ಜಲ್ಲಿಕಟ್ಟು ಯಾವ ಹಬ್ಬದೊಂದಿಗೆ ಸಂಸರ್ಗ (ನಂಟು) ಹೊಂದಿರುತ್ತದೆ?
ಎ) ಪೊಂಗಲ್ ಬಿ) ಶಿವರಾತ್ರಿ
ಸಿ) ದಸರಾ ಡಿ) ದೀಪಾವಳಿ

54. ಯಾವ ದೇಶದಲ್ಲಿ ಮೂಲಭೂತ ಕರ್ತವ್ಯಗಳು ಭಾರತೀಯ ಸಂವಿಧಾನದಲ್ಲಿ ಒಳಗೊಂಡವು?
ಎ) 1976 ಬಿ) 1965 ಸಿ) 1970 ಡಿ) 1982

55. ಕೆಳಗಿನವರಲ್ಲಿ ಯಾರು ಭಾರತದ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸುವುದಿಲ್ಲ?
ಎ) ರಾಜ್ಯಸಭಾ ಸದಸ್ಯರು
ಬಿ) ವಿಧಾನ ಸಭೆಗಳ ಸದಸ್ಯರು
ಸಿ) ವಿಧಾನ ಪರಿಷತ್ತುಗಳ ಸದಸ್ಯರು
ಡಿ) ದೆಹಲಿ ವಿಧಾನ ಸಭೆಯ ಸದಸ್ಯರು

56. ಸದಸ್ಯರಾಗಿರದೆ, ಮತದಾನದ ಹಕ್ಕು ಇಲ್ಲದೆ, ಯಾರು ಸಂಸತ್ತಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಬಹುದು?
ಎ) ಭಾರತದ ಮುಖ್ಯ ನ್ಯಾಯಾಧೀಶರು
ಬಿ) ಅಟಾರ್ನಿಜನರಲ್
ಸಿ) ಸಿಎಜಿ
ಡಿ) ರಾಷ್ಟ್ರಾಧ್ಯಕ್ಷರು

57. ಭಾರತೀಯ ಸಂವಿಧಾನದ 44ನೆಯ ವಿಧಿಯು ಇದಕ್ಕೆ ಸಂಬಂಧಿಸಿದೆ
ಎ) ಮೂಲಭೂತ ಹಕ್ಕು
ಬಿ) ಪ್ರಾರಂಭದ ಬಾಲ್ಯ ಕಾಳಜಿ
ಸಿ) ಪೌರತ್ವ
ಡಿ) ಸಮಾನ ನಾಗರಿಕತೆ ಸಂಹಿತೆ

58. ಯಾವ ವಿಧಿಯು ಭಾರತೀಯ ಸಂವಿಧಾನದ "ಹೃದಯ ಆತ್ಮ" ಆಗಿರುತ್ತದೆ?
ಎ) 19ನೆಯ ವಿಧಿ ಬಿ) 32ನೆಯ ವಿಧಿ
ಸಿ) 20ನೆಯ ವಿಧಿ ಡಿ) 30ನೆಯ ವಿಧಿ

59. ದಕ್ಷಿಣ ಆಫ್ರಿಕಾದಿಂದ ಮರಳಿದ ನಂತರ ಗಾಂಧೀಜಿಯವರ ಪ್ರಥಮ ಯಶಸ್ವಿ ಸತ್ಯಾಗ್ರಹ ಇದಾಗಿತ್ತು?
ಎ) ದಂಡಿ ಬಿ) ಬರ್ಡೋಲಿ
ಸಿ) ಚಂಪಾರಣ್ ಡಿ) ಚೌರಿ–ಚೌರ

60. ಸರ್ವೋಚ್ಚ ನ್ಯಾಯಾಲಯವು ಡಿ ಕೆ ಬಸು V/s ಪಶ್ಚಿಮ ಬಂಗಾಲ ರಾಜ್ಯ ಪ್ರಕರಣದಲ್ಲಿ ಕೆಳಗಿನದಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಿ ಸೂತ್ರಗಳನ್ನು ನೀಡಿತು.
ಎ) ಪರಿಸರ ಸಂರಕ್ಷಣೆ
ಬಿ) ದಸ್ತಗಿರಿ ಸಂದರ್ಭಗಳಲ್ಲಿ ಅನುಸರಿಸಬೇಕಾದ ನಿಯಮಾವಳಿಗಳು
ಸಿ) ಶಿಶು ಸಂರಕ್ಷಣೆ
ಡಿ) ಮಹಿಳೆಯರ ಹಕ್ಕುಗಳು

61. 1929ರ ಭಾರತೀಯ ಕಾಂಗ್ರೆಸ್‌ನ ಲಾಹೋರ್ ಅಧಿವೇಶನದ ಅಧ್ಯಕ್ಷತೆಯನ್ನು ಯಾರು ವಹಿಸಿದ್ದರು?
ಎ) ಜವಾಹರ್ ಲಾಲ್ ನೆಹರೂ
ಬಿ) ಮೋತಿಲಾಲ್ ನೆಹರೂ
ಸಿ) ರಾಜೇಂದ್ರ ಪ್ರಸಾದ್
ಡಿ) ಲಾಲಾ ಲಜ್‌ಪತ್ ರಾಯ್

62. ಕೆಳಗಿನವುಗಳಲ್ಲಿ ಯಾವುದು ಹಸಿರು ಮನೆ ಅನಿಲ ಆಗಿರುವುದಿಲ್ಲ?
ಎ) ಮಿಥೇನ್ ಬಿ) ನೈಟ್ರಸ್ ಆಕ್ಸೈಡ್
ಸಿ) ಜಲಜನಕ ಡಿ) ಇಂಗಾಲಾಮ್ಲ

63. ಯಾವ ಸಾಂವಿಧಾನಿಕ ತಿದ್ದುಪಡಿಯು ಭಾರತದಲ್ಲಿ ಜಿಎಸ್‌ಟಿ ಜಾರಿಗೆ ಕಾರಣವಾಯಿತು?
ಎ) 100 ಬಿ) 105 ಸಿ) 110 ಡಿ) 101

64. ರೇಬಿಸ್ ರೋಗವು ಇದಾಗಿದೆ
ಎ) ವೈರಲ್ ರೋಗ
ಬಿ) ಬ್ಯಾಕ್ಟೀರಿಯಲ್ ರೋಗ
ಸಿ) ಫಂಗಲ್ ರೋಗ
ಡಿ) ಪ್ಯಾರಸಿಟಿಕ್ ರೋಗ

65. ಅತಿಭೇದಿಯ ಶಮನಕ್ಕೆ ಬಳಸಲಾಗುವ ORSನ ಪೂರ್ಣ ರೂಪ
ಎ) ಓರಲ್ ರೀಚಾರ್ಜಿಂಗ್ ಸೊಲ್ಯೂಷನ್
ಬಿ) ಓರಲ್ ರಿಡ್ಯೂಸಿಂಗ್ ಸೊಲ್ಯೂಷನ್
ಸಿ) ಓರಲ್ ರಿಪ್ಲೆನಿಷಿಂಗ್ ಸೊಲ್ಯೂಷನ್
ಡಿ) ಓರಲ್ ರೀಹೈಡ್ರೇಷನ್ ಸಾಲ್ಟ್

66. ಈ ಕೆಳಗಿನವುಗಳಲ್ಲಿ ಯಾವುದು ಜಗತ್ತಿನ ಎರಡನೇ ಅತ್ಯಂತ ಜನಸಂಖ್ಯೆಯುಳ್ಳ ದೇಶವಾಗಿದೆ?
ಎ) ಚೀನಾ ಬಿ) ಭಾರತ
ಸಿ) ಯುಎಸ್‌ಎ ಡಿ) ಬ್ರೆಜಿಲ್

67. ಲಿಂಗಾನುಪಾತದಲ್ಲಿ ಯಾವ ರಾಜ್ಯವು ಪ್ರಥಮ ಎಂದು ಪರಿಗಣಿಸಲ್ಪಟ್ಟಿದೆ?
ಎ) ಕೇರಳ ಬಿ) ಮಣಿಪುರ
ಸಿ) ಮಿಜೋರಾಮ್ ಡಿ) ಪಂಜಾಬ್

68. ಕೆಳಗಿನವುಗಳಲ್ಲಿ ಯಾವುದು ಪರಮಾಣ್ವಕ ಖನಿಜ ಆಗಿರುವುದಿಲ್ಲ?
ಎ) ಯುರೇನಿಯಂ ಬಿ) ಥೋರಿಯಂ
ಸಿ) ಲಿಥಿಯಂ ಡಿ) ಕಯನೈಟ್

69. ಕೂಡಂಕುಲಂ ಪ್ರಾಜೆಕ್ಟ್ ಕೆಳಗಿನ ರಾಷ್ಟ್ರದ ನೆರವಿನೊಂದಿಗೆ ಅಭಿವೃದ್ಧಿಪಡಿಸಲ್ಪಟ್ಟಿದೆ

ಎ) ಯುಎಸ್ಎ ಬಿ) ಕೆನಡಾ
ಸಿ) ರಷ್ಯಾ ಡಿ) ಯುಕೆ

70. ಕೆಳಗಿನ ಜಿಲ್ಲೆಗಳಲ್ಲಿ ಯಾವುದು ಅತ್ಯಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುತ್ತದೆ?

ಎ) ದಾವಣಗೆರೆ ಬಿ) ಬಿಜಾಪುರ
ಸಿ) ಬಳ್ಳಾರಿ ಡಿ) ತುಮಕೂರು

71. ಯಾವುದೋ ಒಂದು ಭಾಷೆಯಲ್ಲಿ CALCUTTAವು ACCLTUAT ಎಂದು ಬರೆಯಲ್ಪಡುತ್ತದೆ ಎಂದಾದರೆ, ನೀವು ಆ ಭಾಷೆಯಲ್ಲಿ KARNATAKವನ್ನು ಹೇಗೆ ಬರೆಯುತ್ತೀರಿ?

ಎ) AKRNTAAK
ಬಿ) AKNRTAKA
ಸಿ) AKNRATAK
ಡಿ) NATKAKAR

72. ಭಾವಚಿತ್ರವೊಂದರತ್ತ ಬೊಟ್ಟು ಮಾಡುತ್ತ ಒಬ್ಬಾತ "ಆತನ ಮಗ ನನ್ನ ಓರ್ವನೇ ಸಹೋದರ" ಎಂದನು. ಈ ಮನುಷ್ಯನು ಭಾವಚಿತ್ರದಲ್ಲಿರುವ ಮನುಷ್ಯನೊಂದಿಗೆ ಯಾವ ಸಂಬಂಧವನ್ನು ಹೊಂದಿರುತ್ತಾನೆ?

ಎ) ತಂದೆ
ಬಿ) ಸಹೋದರ
ಸಿ) ಸೋದರ ಸಂಬಂಧ
ಡಿ) ಸೋದರಳಿಯ

73. ಅರುಣನ ವಯಸ್ಸಿನ ಅನುಪಾತವು ವಿನೋದನ ವಯಸ್ಸಿಗೆ 4:3 ಆಗಿರುತ್ತದೆ. ವಿನೋದನು 5 ವರ್ಷಗಳ ನಂತರ 20 ವರ್ಷಗಳ ಹರೆಯದ ವನಾಗುತ್ತಾನೆ. 3 ವರ್ಷಗಳ ಮುಂಚೆ ಅರುಣನ ವಯಸ್ಸು ಎಷ್ಟಾಗಿತ್ತು?

ಎ) 20 ವರ್ಷಗಳು
ಬಿ) 21 ವರ್ಷಗಳು
ಸಿ) 17 ವರ್ಷಗಳು
ಡಿ) 15 ವರ್ಷಗಳು

74. ಚಚ್ಚೌಕವೊಂದರ ಪ್ರತಿಯೊಂದು ಪಾರ್ಶ್ವವು 25% ಹೆಚ್ಚಳಗೊಂಡಲ್ಲಿ, ಅದರ ಕಮಾನುಗಳು ಇಷ್ಟು ಹೆಚ್ಚಾಗುತ್ತದೆ

ಎ) 25% ಬಿ) 50%
ಸಿ) 40.5% ಡಿ) 56.25%

75. ಕಾರೊಂದರ ಪೆಟ್ರೋಲ್‌ನ ಸರಾಸರಿ ಖರ್ಚು ತಿಂಗಳುಗಳಿಗೆ 96 ಲೀ ಮತ್ತು ಮುಂದಿನ 7 ತಿಂಗಳುಗಳಿಗೆ ಅದು 120 ಲೀ ಆಗುವುದಾದರೆ ಮಾಸಿಕ ಸರಾಸರಿ ಖರ್ಚು ಎಷ್ಟಾಗುತ್ತದೆ?

ಎ) 105 ಲೀ
ಬಿ) 100 ಲೀ
ಸಿ) 110 ಲೀ
ಡಿ) 115 ಲೀ

76. ವಿದ್ಯಾರ್ಥಿಯೋರ್ವನು ಲೆಕ್ಕ ಮಾಡಿದ್ದರಲ್ಲಿ ಎಷ್ಟು ಸರಿಯಾಗಿತ್ತೋ ಅದರ ಎರಡು ಪಟ್ಟು ತಪ್ಪಾಗಿರುತ್ತದೆ. ಆತ ಎಲ್ಲಾ ಸೇರಿ ಒಟ್ಟು 48 ಗಣಿತ ಲೆಕ್ಕಗಳನ್ನು ಯತ್ನಸಿರುವುದಾದಲ್ಲಿ ಎಷ್ಟು ಲೆಕ್ಕಗಳನ್ನು ಅವನು ಸರಿಯಾಗಿ ಬಿಡಿಸಿದ್ದಾನೆ?

ಎ) 12 ಬಿ) 16 ಸಿ) 18 ಡಿ) 24

77. ಮೂರನೆಯ ಪಾಣಿಪತ್ ಯುದ್ಧದ ಸಮಯದಲ್ಲಿ ಈ ಕೆಳಗಿನವರಲ್ಲಿ ಯಾರು ದೆಹಲಿಯ ಚಕ್ರವರ್ತಿಯಾಗಿದ್ದನು?

ಎ) ಮಹಮ್ಮದ್ ಷಾ
ಬಿ) ಅಹ್ಮದ್ ಷಾ
ಸಿ) ಷಾ ಅಲಂ–II
ಡಿ) ಅಕ್ಬರ್ ಷಾ–II

78. ಕೆಳಗಿನವುಗಳಲ್ಲಿ ಯಾವುದು ಭಾರತಕ್ಕೆ ಬಂದ ಕೊನೆಯ ಯುರೋಪಿಯನ್ ಪ್ರಭುತ್ವವಾಗಿತ್ತು?

ಎ) ಫ್ರೆಂಚ್ ಬಿ) ಪೋರ್ಚುಗೀಸ್
ಸಿ) ಇಂಗ್ಲೀಷ್ ಡಿ) ಡಚ್

79. ನಾಗರಿಕ ಸೇವೆಗಳಿಗೆ ಪ್ರವೇಶಕ್ಕೆ ಪರೀಕ್ಷಾ ಪದ್ಧತಿಯನ್ನು ____ವರ್ಷದಲ್ಲಿ ಜಾರಿಗೆ ತರಲಾಯಿತು.

ಎ) 1793 ಬಿ) 1813 ಸಿ) 1833 ಡಿ) 1853

80. ಸೌರವ್ಯೂಹದಲ್ಲಿರುವ ಅತೀ ಚಿಕ್ಕಗ್ರಹ

ಎ) ಮಂಗಳ ಬಿ) ಬುಧ
ಸಿ) ಯುರೇನಸ್ ಡಿ) ಶನಿ

81. ಈಸ್ಟ್ ಇಂಡಿಯಾ ಅಸೋಸಿಯೇಶನ್‌ನ ಸ್ಥಾಪಕರು ಯಾರಾಗಿದ್ದರು?

ಎ) ದೇವೆಂದ್ರನಾಥ ಠಾಗೋರ್
ಬಿ) ಎಂ ಜಿ ರಾನಡೆ
ಸಿ) ದಾದಾಭಾಯಿ ನವ್‌ರೋಜಿ
ಡಿ) ಮೇಲಿನವರಲ್ಲಿ ಯಾರೂ ಅಲ್ಲ

82. ಕೆಳಗೆ ಹೆಸರಿಸಿದ ನೇತಾರರಲ್ಲಿ ಯಾರು 1920ರಲ್ಲಿ ಅಸಹಕಾರ ಚಳುವಳಿಯು ಪ್ರಾರಂಭಿಸಲ್ಪಟ್ಟ ದಿನದಂದು ನಿಧನ ಹೊಂದಿದರು?

ಎ) ಗೋಪಾಲಕೃಷ್ಣ ಗೋಖಲೆ
ಬಿ) ಬಾಲ ಗಂಗಾಧರ ತಿಲಕ್
ಸಿ) ಫಿರೋಜ್ ಷಾ ಮೆಹ್ತಾ
ಡಿ) ಸಿ ಆರ್ ದಾಸ್

83. ಲಕ್ನೋ ಒಪ್ಪಂದವು ಇವುಗಳ /ಇವರ ನಡುವೆ ನಿರ್ಣಾಯಿಸಲ್ಪಟ್ಟಿತು.

ಎ) ಕಾಂಗ್ರೆಸ್ ಮತ್ತು ಬ್ರಿಟಿಷ್
ಬಿ) ಸೌಮ್ಯವಾದಿಗಳು ಮತ್ತು ತೀವ್ರವಾದಿಗಳು
ಸಿ) ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್
ಡಿ) ಗಾಂಧಿ ಮತ್ತು ಅಂಬೇಡ್ಕರ್

84. ಭಾರತೀಯ ರಾಷ್ಟ್ರೀಯ ಚಳುವಳಿಯಲ್ಲಿ ______ಅವಧಿಯನ್ನು ಒಂದು ಸಾಮೂಹಿಕ ಕ್ರಾಂತಿಯ ಯುಗವಾಗಿ ಪರಿಗಣಿಸಬಹುದು.

ಎ) 1857–1885
ಬಿ) 1885–1895
ಸಿ) 1901–1905
ಡಿ) 1920–1947

85. ಭಾರತದ ಸಂವಿಧಾನಿಕ ಇತಿಹಾಸದಲ್ಲಿ ಕೆಳಗಿನ ಬೆಳವಣಿಗೆಗಳ ಸರಿಯಾದ ಕ್ರಮಾನುಗತಿ ಯಾವುದು?

1. ಕ್ಯಾಬಿನೆಟ್ ಮಿಶನ್ ಪ್ಲ್ಯಾನ್
2) ಮಿಂಟೋ–ಮಾರ್ಲೆ ವರದಿ
3) ಮಾಂಟೆಗ್ಯೂ–ಚೆಮ್ಸ್‌ಫಾರ್ಡ್ ವರದಿ
4) ಸೈಮನ್ ಆಯೋಗ ವರದಿ

ಎ) 2, 3, 4, 1
ಬಿ) 3, 2, 1,4
ಸಿ) 1, 4, 2, 3
ಡಿ) 3, 4, 1, 2

86. ಭಾರತದಲ್ಲಿ ಸರ್ವೋಚ್ಚ ನ್ಯಾಯಾಲಯವು ಮತ್ತು ಉಚ್ಚ ನ್ಯಾಯಾಲಯಗಳು ಹೊರಡಿಸಬಹುದಾದ ರಿಟ್‌ಗಳ ಸಂಖ್ಯೆ

ಎ) 3 ಬಿ) 4 ಸಿ) 5 ಡಿ) 6

87. ಸೇಷೆಲ್ಸ್ ದ್ವೀಪವು ಇಲ್ಲಿದೆ

ಎ) ಇಂಡಿಯನ್ ಓಶನ್

ಬಿ) ಪ್ಯಾಸಿಫಿಕ್ ಓಶನ್

ಸಿ) ಆರ್ಕ್‌ಟಿಕ್ ಓಶನ್

ಡಿ) ಅಟ್ಲಾಂಟಿಕ್ ಓಶನ್

88. ತೈಲ ಮತ್ತು ನೈಸರ್ಗಿಕ ಅನಿಲ ಆಯೋಗ ಇದರ ಪ್ರಧಾನ ಕಛೇರಿ

ಎ) ಗೋವಾ

ಬಿ) ವಿಶಾಖಪಟ್ಟಣಂ

ಸಿ) ಮುಂಬಯಿ

ಡಿ) ಡೆಹ್ರಾಡೂನ್

89. ನೊಬೆಲ್ ಪಾರಿತೋಷಕವನ್ನು ಪ್ರಥಮ ಬಾರಿಗೆ ಈ ವರ್ಷ ನೀಡಲಾಯಿತು.

ಎ) 1970 ಬಿ) 1901

ಸಿ) 1905 ಡಿ) 1900

90. ಭಾರತ ರತ್ನ ನೀಡಲ್ಪಟ್ಟ ಈರ್ವರು ವಿದೇಶಿಯರು ಇವರಾಗಿದ್ದಾರೆ

ಎ) ನೆಲ್ಸನ್ ಮಂಡೇಲ ಮತ್ತು ಟೀಟೊ

ಬಿ) ಅಬ್ದುಲ್ ಗಫರ್ ಖಾನ್ ಮತ್ತು ಟೀಟೊ

ಸಿ) ನೆಲ್ಸನ್ ಮಂಡೇಲ ಮತ್ತು ಖಾನ್ ಅಬ್ದುಲ್ ಗಫಾರ್ ಖಾನ್

ಡಿ) ಮೇಲಿನವರಲ್ಲಿ ಯಾರೂ ಅಲ್ಲ

91. ಭಾರತದ ಪ್ರಥಮ ಮಹಿಳಾ ನ್ಯಾಯಾಧೀಶರು ಯಾರು?

ಎ) ಲೀಲಾ ಸೇತ್ ಬಿ) ಫಾತಿಮಾ ಬೀವಿ

ಸಿ) ಅನ್ನಾ ಚಂಡಿ ಡಿ) ಸುಜಾತ

92. ಭಾರತೀಯ ವಿಜ್ಞಾನ ಸಂಸ್ಥೆಯು ಯಾವಾಗ ಸ್ಥಾಪಿಸಲ್ಪಟ್ಟಿತು?

ಎ) 1909 ಬಿ) 1910

ಸಿ) 1921 ಡಿ) 1914

93. ಅಂತರರಾಷ್ಟ್ರೀಯ ನ್ಯಾಯಿಕ ನ್ಯಾಯಾಲಯ ಎಲ್ಲಿದೆ?

ಎ) ವಿಯೆನ್ನಾ ಬಿ) ಪ್ಯಾರಿಸ್

ಸಿ) ಜಿನೇವಾ ಡಿ) ಹೇಗ್

94. ಮಾನವ ದೇಹದಲ್ಲಿರುವ ಎಲುಬುಗಳ ಸಂಖ್ಯೆ

ಎ) 198 ಬಿ) 206 ಸಿ) 220 ಡಿ) 200

95. ಭಾರತದ ಸಂವಿಧಾನದ ಹತ್ತನೆಯ ಅನುಬಂಧವು ಇದರೊಂದಿಗೆ ವ್ಯವಹರಿಸುತ್ತದೆ

ಎ) ಪಕ್ಷಾಂತರ ಕಾರಣಗಳಿಂದ ಅನರ್ಹತೆ

ಬಿ) ಭಾಷೆಗಳು

ಸಿ) ಶಪಥಗ್ರಹಣದ ನಮೂನೆಗಳು

ಡಿ) ರಾಜ್ಯಗಳು

96. ಕೆಳಗಿನ ಗ್ರಹಗಳಲ್ಲಿ ಯಾವುದು ಚಂದ್ರನನ್ನು ಹೊಂದಿರುವುದಿಲ್ಲ?

ಎ) ಪ್ಲೂಟೋ ಮತ್ತು ಬುಧ

ಬಿ) ಪ್ಲೂಟೋ ಮತ್ತು ಮಂಗಳ

ಸಿ) ಮಂಗಳ ಮತ್ತು ಶುಕ್ರ

ಡಿ) ಬುಧ ಮತ್ತು ಶುಕ್ರ

97. ದ್ರೋಣಾಚಾರ್ಯ ಪ್ರಶಸ್ತಿ ಇದರೊಂದಿಗೆ ನಂಟು ಹೊಂದಿರುತ್ತದೆ

ಎ) ಪ್ರಸಿದ್ಧ ಕಲಾವಿದರು

ಬಿ) ಕ್ರೀಡಾ ತರಬೇತಿದಾರರು

ಸಿ) ಶಸ್ತ್ರವೈದ್ಯರು

ಡಿ) ಪರಿಣಿತ ಎಂಜಿನಿಯರುಗಳು

98. ಭಾರತದಲ್ಲಿ ರಾಜ್ಯಗಳ ಕಾನೂನು ಸಲಹೆಗಾರರನ್ನು ಹೀಗೆಂದು ಕರೆಯುತ್ತಾರೆ

ಎ) ಅಡ್ವೊಕೇಟ್ ಜನರಲ್

ಬಿ) ಸಾಲಿಸಿಟರ್ ಜನರಲ್

ಸಿ) ಮುಖ್ಯ ಕಾನೂನು ಅಧಿಕಾರಿ

ಡಿ) ರಾಜ್ಯ ವಕೀಲ

99. ಕೆಳಗಿನ ರಿಟ್‌ಗಳಲ್ಲಿ ಯಾವುದು ಕಾನೂನುಬಾಕಿ ಬಂಧನದೊಂದಿಗೆ ವ್ಯವಹರಿಸುತ್ತದೆ?

ಎ) ಮ್ಯಾಂಡಮಸ್

ಬಿ) ಸರ್ಟಿಯೋರರಿ

ಸಿ) ಹೇಬಿಯಸ್ ಕಾರ್ಪಸ್

ಡಿ) ಕೋ ವಾರಂಟೊ

100. ಭಾರತೀಯ ಸಂವಿಧಾನದಡಿಯಲ್ಲಿ ಕೆಳಗಿನವುಗಳಲ್ಲಿ ಯಾವುದು ಒಂದು ಮೂಲಭೂತ ಹಕ್ಕು ಆಗಿರುವುದಿಲ್ಲ?

ಎ) ಸಮಾನತೆ ಹಕ್ಕು ಬಿ) ವಾಕ್ ಹಕ್ಕು

ಸಿ) ಸ್ವಾತಂತ್ರ್ಯ ಹಕ್ಕು ಡಿ) ಆಸ್ತಿ ಹಕ್ಕು

**KEY ANSWER**

| | | | | | | | |
|---|---|---|---|---|---|---|---|
| **1** | a | **26** | b | **51** | b | **76** | b |
| **2** | a | **27** | a | **52** | c | **77** | b |
| **3** | a | **28** | b | **53** | a | **78** | a |
| **4** | b | **29** | b | **54** | a | **79** | d |
| **5** | d | **30** | d | **55** | c | **80** | b |
| **6** | b | **31** | d | **56** | b | **81** | c |
| **7** | d | **32** | c | **57** | d | **82** | b |
| **8** | b | **33** | a | **58** | b | **83** | b |
| **9** | c | **34** | a | **59** | c | **84** | d |
| **10** | a | **35** | a | **60** | b | **85** | a |
| **11** | c | **36** | c | **61** | a | **86** | c |
| **12** | a | **37** | a | **62** | c | **87** | a |
| **13** | d | **38** | b | **63** | d | **88** | d |
| **14** | d | **39** | b | **64** | a | **89** | b |
| **15** | a | **40** | a | **65** | d | **90** | c |
| **16** | b | **41** | b | **66** | b | **91** | a |
| **17** | a | **42** | c | **67** | a | **92** | a |
| **18** | a | **43** | d | **68** | d | **93** | d |
| **19** | a | **44** | b | **69** | c | **94** | b |
| **20** | c | **45** | c | **70** | d | **95** | a |
| **21** | c | **46** | a | **71** | b | **96** | d |
| **22** | c | **47** | d | **72** | a | **97** | b |
| **23** | a | **48** | b | **73** | c | **98** | a |
| **24** | c | **49** | c | **74** | d | **99** | c |
| **25** | d | **50** | a | **75** | c | **100** | d |